ಕಾಲದಲ್ಲೇ ಬಹಳ ಹೆಚ್ಚಿಗೆ ಪೆಟ್ರೋಲ್ ಬೆಲೆ ಹೆಚ್ಚಾಗಿರುವುದು. ಆದ್ದರಿಂದ ನಿಮಗೆ ಇದರ ಬಗ್ಗೆ ಮಾತನಾಡಲು ನೈತಿಕ ಹಕ್ಕಿಲ್ಲ ಬೇರೆಯದರ ಬಗ್ಗೆ ಮಾತನಾಡಿ.

ಶ್ರೀ ಆರಗಜ್ಞಾನೇಂದ್ರ : ಹಕ್ಕಿನ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಏನಾದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಾ

(ಗೊಂದಲ)

ಶ್ರೀ ಸಿ.ಟಿ. ರವಿ : ನೀವು ನಿಮ್ಮ ಅವಧಿಯಲ್ಲಿ ಎಷ್ಟು ಸಲ ಏರಿಸಿದ್ದೀರಿ ಎಂಬ ಬಗ್ಗೆ ಸಹ ಚರ್ಚೆಯಾಗಲಿ. ನೀವು ಆರು ಬಾರಿ ಏರಿಸಿದ್ದೀರಿ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಬೆಲೆ ಏರಿಕೆ ವಿಚಾರದಲ್ಲಿ ತಾವೇನಾದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟೀದ್ದೀರಾ?

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಚರ್ಚೆಗೆ ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ ಸಾಂಕೇತಿಕವಾಗಿ ವಾಟಾಳ್ ನಾಗರಾಜ್ ಮತ್ತು ಅವರ ಸ್ನೇಹಿತರು ಆ ಮೂರು ಜನರು ಈ ವಿಚಾರ ಮಾಡಿದ್ದಾರೆ.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಕ್ಲಾರಿಫಿಕೇಷನ್ ಕೊಡಿ.

ಅಧ್ಯಕ್ಷರು : ಎಲ್ಲಾ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾ ಹೋದರೆ ಆಗುವುದಿಲ್ಲ. ಬಿಲ್ಲನ್ನು ತೆಗೆದುಕೊಳ್ಳಬೇಕು, ಪಾಸ್ ಆಗಬೇಕೆಂದು ಬಿ.ಎಸ್.ಸಿ. ಯಲ್ಲಿ ತೀರ್ಮಾನವಾಗಿದೆ. ಅವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಮಧ್ಯಾಹ್ನ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಮೊದಲೇ ಹೇಳಿದೆ. ಅದಕ್ಕೆ ನಾನು ಮಧ್ಯಾಹ್ನ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಎಲ್ಲರು ಸಹಕರಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ತಮಗೂ ಅವಕಾಶ ಕೊಡುತ್ತೇನೆ.

ಅಧ್ಯಕ್ಷರ ಅಪ್ಪಣೆಯ ಮೇರೆಗೆ

(ಆ) ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ವಿರೋಧ ಪಕ್ಷದ ಶಾಸಕರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ : ಸ್ವಾಮಿ ಅದು ಇರಲಿ. ದಯವಿಟ್ಟು ಸ್ವಲ್ಪ ಕೇಳಿ. ಕಳೆದ ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ calling attention ಹಾಕಿ ತಮ್ಮ ಗಮನ ಸೆಳೆದಿದ್ದೆ. ಆಗ ಗೌರವಾನ್ವಿತ ಮುಖ್ಯಮಂತ್ರಿಯವರು "ನಿಮ್ಮ

ಕ್ಷೇತ್ರದ ಏನೇನು ಅನ್ಯಾಯವಾಗಿದೆ ಅದನ್ನು ಬಗೆಹರಿಕೊಡುತ್ತೇನೆ " ಎಂದು ಹೇಳಿದ್ದರು. ಆದರೆ ಈವತ್ತಿನವರೆಗೂ ಒಂದು ರೂಪಾಯಿಯ ಕೆಲಸ ಆಗಿಲ್ಲ ಇಡೀ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯಾರ್ಯಾರು ವಿರೋಧ ಪಕ್ಷದ ಶಾಸಕರಿದ್ದಾರೆ. ಎಲ್ಲಾ ಕ್ಷೇತ್ರದಲ್ಲೂ ತಾರಾತಮ್ಯ ನಡೆಯುತ್ತಿದೆ. ಪಕ್ಕದಲ್ಲಿ ಮುಖ್ಯಮಂತ್ರಿಗಳ ಕ್ಷೇತ್ರ ಇದೆ. ಅಲ್ಲಿ ಸುಮಾರು ಮೂವತ್ತು ಕೋಟಿ ರೂಪಾಯಿಯ ಕೆಲಸ ನಡೆಯುತ್ತಿದೆ. ಮಾಗಡಿ ಕ್ಷೇತ್ರದಲ್ಲಿ 20 ಕೋಟಿ ರೂಗಳ ಕೆಲಸ ನಡೆಯುತ್ತಿದೆ, ಬಹಳ ಸಂತೋಷ, ಕನಕಪುರದಲ್ಲಿ ಮಾಡಿಕೊಳ್ಳಲಿ. ಆದರೆ ನಾವು ಯಾರು ವಿರೋಧ ಪಕ್ಷದ ಶಾಸಕರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದ್ದೇವೆ ಇಲ್ಲಿನ ರಾಜಕೀಯ ತಾರಾತಮ್ಯವನ್ನು ನೋಡಿ.

ಶ್ರೀ ಕೆ. ಕೃಷ್ಣಪ್ಪ : ಬೆಂಗಳೂರು ಗ್ರಾಮಾಂತರ ಮಾತ್ರವಲ್ಲ. ಬೆಂಗಳೂರು ನಗರ ಜಿಲ್ಲೆಗೂ ಅದೇ ಗತಿಯಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮ ಕ್ಷೇತ್ರಗಳಲ್ಲಿ ಒಂದು ರೂಪಾಯಿಯ ಕೆಲಸವನ್ನು ತೆಗೆದುಕೊಳ್ಳದೆ ರಾಜಕಾರಣ ಮಾಡುತ್ತಿರುವ ವಿಚಾರವನ್ನು ಪ್ರತಿಭಟನೆ ಮಾಡಿ ಈ ಸಭೆ ನಡೆಯುವವರೆಗೆ ನಾನು ಬಾವಿಯಲ್ಲಿ ಧರಣಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ನೀವೆಲ್ಲಾ ಎದ್ದು ನಿಂತುಕೊಳ್ಳುತ್ತೀರಿ? ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ. ಶಿವರಾಮ್ : ನಮ್ಮ ಹಾಸನದಲ್ಲೂ ಕೂಡ ಇದೇ ಪರಿಸ್ಥಿತಿ ಮುಂದುವರೆದಿದೆ. ಈಗಾಗಲೇ ರಸ್ತೆಯಲ್ಲಿ ವಾಹನಗಳು ಸಂಚರಿಸದೆಯೇ ಮುಷ್ಕರ ಮಾಡತಕ್ಕದ್ದು ಆಗಿದೆ. ಆದ್ದರಿಂದ ಮುಖ್ಯಮಂತ್ರಿಗಳು ಇಲ್ಲೇನು ಆಶ್ವಾಸನೆ ಕೊಟ್ಟಿದ್ದರೊ ಅದನ್ನು ಅನುಷ್ಟಾನಕ್ಕೆ ತಾರದಿರುವುದರಿಂದ ನಾನು ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದೇನೆ.

(ಕಾಂಗ್ರೇಸ್ ಪಕ್ಷದ ಶಾಸಕರು ಧರಣಿ ಮಾಡಲು ಬಾವಿಗೆ ತೆರಳಿದರು)

ಅಧ್ಯಕ್ಷರು : ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಶಿವಕುಮಾರ್‌ರವರೆ ದಯಮಾಡಿ ನಿಮ್ಮ ಜಾಗಕ್ಕೆ ಹೋಗಿ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇಲ್ಲ ಮಧ್ಯಾಹ್ನ ಬರುತ್ತಾರೆ. ಆಗ ನಾನು ಇದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಆದ್ದರಿಂದ ದಯಮಾಡಿ ನೀವು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಈಗ ಚರ್ಚೆಯಾಗಬೇಕು. ಈಗ ನ್ಯಾಯಯುತ ವಾದ ತೀರ್ಮಾನವಾಗಬೇಕು. ಇವರು ಹಿಂದೆ ಅಧಿಕಾರದಲ್ಲಿದ್ದಾಗ ಏನೇನು ತಾರತಮ್ಯ ಮಾಡಿದ್ದರು ಎಂಬುದರ ಬಗ್ಗೆ ಈಗ ತೀರ್ಮಾನವಾಗಬೇಕು.

(ಗೊಂದಲ)

ಅಧ್ಯಕ್ಷರು : ಇದೇನಿದು? ದಯಮಾಡಿ ಎಲ್ಲರೂ ಸುಮ್ಮನೆ ಇರಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಇವರು ಈಗ ಹೋಗಿ ಬಾವಿಯಲ್ಲಿ ಕುಳಿತಿದ್ದಾರೆ. ಇವರು ಏನೇನು ತಾರಾತಮ್ಯ ಮಾಡಿದ್ದಾರೆಂದು ಈಗ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಎನ್. ಧರ್ಮ್‌ಸಿಂಗ್ : ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮಾನ್ಯ ಶಿವಕುಮಾರ್‌ರವರೆ, ಮಧ್ಯಾಹ್ನ ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆ. ಅವರು ಇದ್ದಾಗ ಈ ಪ್ರಶ್ನೆಗಳನ್ನು ಪ್ರಸ್ತಾಪ ಮಾಡಬಹುದು. ಅವರು ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಡುತ್ತಾರೆ. ಅದನ್ನು ಬಿಟ್ಟು ಈ ರೀತಿ ಮಾಡಿದರೆ ಚೆನ್ನಾಗಿರುವುದಿಲ್ಲ.

(ಗೊಂದಲ)

(ಕಾಂಗ್ರೆಸ್ ಪಕ್ಷದ ಶಾಸಕರು ಭಾವಿಯಲ್ಲಿ ಧರಣಿ ಹೂಡಿ ಘೋಷಣೆಯನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಈಗ Leader of the Opposition ರವರು ಮಾತನಾಡುತ್ತಿದ್ದಾರೆ. ಈಗ ನೀವೇನೋ ಹೇಳುತ್ತಿದ್ದೀರಲ್ಲಾ ಅದನ್ನು ಹೇಳಿ

(ಗೊಂದಲ)

ಶ್ರೀ ಎನ್. ಧರ್ಮ್‌ಸಿಂಗ್ : ಮಾನ್ಯ ಅಧ್ಯಕ್ಷರೆ, ಎಲ್ಲರೂ ಸ್ವಲ್ಪ ನನಗೆ ಸಹಕಾರ ಮಾಡಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಧರ್ಮ್‌ಸಿಂಗ್ ರವರು ಮುಖ್ಯಮಂತ್ರಿಗಳಾಗಿದ್ದಾಗ ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಕೊಟ್ಟಿದ್ದರು ಎಂಬುದನ್ನು ತೆಗೆದಿಡಿ.

ಶ್ರೀ ಎನ್. ಧರ್ಮ್‌ಸಿಂಗ್ : ಮಾನ್ಯ ಅಧ್ಯಕ್ಷರೆ, ಹೋದ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು...

(ಗೊಂದಲ–ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ ಆದರೂ ಇನ್ನು ಘೋಷಣೆಯನ್ನು ಕೂಗುತ್ತಿದ್ದೀರಲ್ಲಾ ಏನಿದು?

ಶ್ರೀ ಎನ್. ಧರ್ಮ್‌ಸಿಂಗ್ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಡಿ.ಕೆ. ಶಿವಕುಮಾರ್‌ರವರು ಹೋದಸದನದಲ್ಲಿ ಪ್ರಸ್ತಾಪ ಮಾಡಿದ್ದರು. ಮಾನ್ಯ ಮುಖ್ಯಮಂತ್ರಿಗಳೂ ಇದ್ದರು. ತಮ್ಮ ಸಮ್ಮುಖದಲ್ಲಿ ಎಲ್ಲೂ ತಾರತಮ್ಯ ಮಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದರು. ನಿಮ್ಮ ಕ್ಷೇತ್ರದಲ್ಲೂ ಕೆಲಸ ಮಾಡಿಸುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿವರೆಗೂ ಕೆಲಸವಾಗುತ್ತಿಲ್ಲ ಇದು ಇಲ್ಲಿ ಒಂದೇ ಕಡೆಯಲ್ಲ ಮಾನ್ಯ ಉಪಮುಖ್ಯಮಂತ್ರಿಗಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ vindictive type of polities ಏನು ನಡೆದಿದೆ ವರ್ಗಾವಣೆಯಲ್ಲಿ, ಕೆಲಸಕಾರ್ಯದಲ್ಲಿ.....

ಶ್ರೀ ಎಸ್.ಎಲ್. ಧರ್ಮೇಗೌಡ : ಮಾನ್ಯ ಧರ್ಮ್‌ಸಿಂಗ್‌ರವರೇ, ನೀವು ಅಧಿಕಾರ ದಲ್ಲಿದ್ದಾಗ ಮಾಡಿಲ್ಲವೆ? ನೀವು ಅಧಿಕಾರದಲ್ಲಿದ್ದಾಗ ಏನು ಮಾಡಿದ್ದಿರಿ?

(ಗೊಂದಲ)

ಶ್ರೀ ಎನ್. ಧರ್ಮ್‌ಸಿಂಗ್ : ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಂದು ಆಶ್ವಾಸನೆಯನ್ನು ಕೊಡಬೇಕು ಮಾನ್ಯ ಮುಖ್ಯಮಂತ್ರಿಗಳು ಬರಲಿ.

(ಗೊಂದಲ)

ಶ್ರೀ ಎಸ್.ಎಲ್. ಧರ್ಮೇಗೌಡ : ತಾವು ಅಧಿಕಾರದಲ್ಲಿದ್ದಾಗ ಮನಾಪಲಿ ಮಾಡಿದ್ದೀರಿ. ಆದರೆ ಈಗ ಇದನ್ನು ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಇಲ್ಲಿ ನಿಮ್ಮ ಸಮಸ್ಯೆಗಳನ್ನು ಜನರ ಸಮಸ್ಯೆಗಳನ್ನು ಚರ್ಚೆ ಮಾಡಿ ತೀರ್ಮಾನ ಮಾಡುವುದಕ್ಕೆ ಬಂದಿರುವುದು. ಆದ್ದರಿಂದ ಮಧ್ಯಾಹ್ನ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ. ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಈ ರೀತಿ ಘೋಷಣೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಈ ಸಭೆಗೆ ಅಡ್ಡಿಪಡಿಸು ವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಬರುತ್ತಾರೆ, ನೀವು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

ನೀವು ಮಾತನಾಡಿ. ಅವರು ಏನು ಹೇಳುತ್ತಾರೆ, ಸರ್ಕಾರ ಏನು ಹೇಳುತ್ತದೆ ಕೇಳಿ. ಆದ್ದರಿಂದ ದಯಮಾಡಿ ನೀವುಗಳು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು : ಈಗ ಸಭೆಯನ್ನು ಅರ್ಧ ಗಂಟೆಗಳ ಕಾಲ ಮುಂದೂಡಲಾಗಿದೆ.

(ಸದನವು 12–42ಕ್ಕೆ ಮುಂದುಡಲ್ಪಟ್ಟು ಅರ್ಧ ಗಂಟೆಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು ಪುನಃ 2 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಸದಸ್ಯರು ಹಾಗೂ ಸದಸ್ಯರಾದ ಶ್ರೀ ಮಂಚನಹಳ್ಳಿ ಮಹದೇವ ಹಾಗೂ ನಾಮನಿರ್ದೇಶಿತ ಸದಸ್ಯರಾದ ಶ್ರೀ ಐವಾನ್ ನಿಗ್ಲಿಯವರು ಬಾವಿಯಲ್ಲಿ ಧರಣಿ ಹೂಡಿದ್ದರು)

ಅಧ್ಯಕ್ಷರ ಅಪ್ಪಣೆಯ ಮೇರೆಗೆ

(2) ವಿಷಯ : ವಿರೋಧ ಪಕ್ಷದ ಶಾಸಕರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿರುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

(ಅಡಚಣೆ)

ಶ್ರೀ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, ಆ ಬಗ್ಗೆ ಈಗಾಗಲೇ ಮಾತನಾಡಿ ಆಗಿದೆ. ಅದರಂತೆ ಮಾಡುತ್ತಾರೆ. ಸ್ಪೀಕರ್ ಅವರ ಮುಂದೆಯೇ ಮಾತನಾಡಲಾಗಿದೆ. ಮತ್ತೆ ಏಕೆ ಅದರ ಬಗ್ಗೆ ಪ್ರಸ್ತಾಪ ಮಾಡುತ್ತೀರಾ.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೆ, ತಾವು ಅಡ್ಡ ಮಾತನಾಡಬೇಡಿ. ಈಗ ತಾವುಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ. ಈಗ ಇದರ ಬಗ್ಗೆ ನಮ್ಮ ಟೀ ಛೇಂಬರಿನಲ್ಲಿ ಮಾತನಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಸಮಸ್ಯೆಗಳಿಗೆ ಉತ್ತರವನ್ನು ಕೊಡುತ್ತಾರೆ. ದಯಮಾಡಿ ತಾವುಗಳೆಲ್ಲರೂ ನಿಮ್ಮಗಳ ಸ್ಥಾನಗಳಿಗೆ ಹೋಗಿ ಉತ್ತರವನ್ನು ಕೇಳಿ.